**ದಿಃ 24.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಟಿ.ಆರ್., ವಕೀಲರಿಂದ**

ನಾನು ಬೆಂಗಳೂರಿನಲ್ಲಿ ವಾಸಿಸುತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನನಗೆ ಓದಿ ತಿಳಿಸಿಲ್ಲ. ನಾನು ವಕೀಲರ ಕಛೇರಿಗೆ ಹೋಗಿರಲಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಈರಮ್ಮ ಮತ್ತು ನಾನು ಸಂಬಂಧಿಕರು ಎಂದರೆ ಸರಿಯಲ್ಲ. ಈರಮ್ಮನ ಮಕ್ಕಳು ಮತ್ತು ನಾನು ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ತಂದೆ ನಂಜುಂಡೇಗೌಡ ಹಾಗೂ ಈರಮ್ಮರವರ ಗಂಡ ಅನಂತಯ್ಯರವರಿಗೂ ಸಂಬಂಧ ಇದೆ ಎಂದರೆ ಸಾಕ್ಷಿಯು ಹಳೆಯ ಸಂಬಂಧವಿದೆ ಎಂದು ನುಡಿಯುತ್ತಾರೆ. ಈರಮ್ಮ ಮತ್ತು ನಾವು ಒಂದೇ ಕುಟುಂಬದವರಾಗಿದ್ದು ಹತ್ತಿರದ ಸಂಬಂಧ ಇದೆ ಎಂದರೆ ಸರಿಯಲ್ಲ. ದಿಃ 10.05.2006 ರ ಕ್ರಯ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಬೂಚನಹಳ್ಳಿಯ ಆಸ್ತಿಯ ಬಗ್ಗೆಯೂ ನನಗೆ ಮಾಹಿತಿ ಇಲ್ಲ. ವಾದಿಯು ಚಿಕ್ಕರಂಗಪ್ಪರವರ ಮಗ ಎಂದರೆ ಸರಿ. ಚಿಕ್ಕರಂಗಪ್ಪರವರ ಆಸ್ತಿಯಲ್ಲಿ ವಾದಿಗೆ ಭಾಗ ಬರಬೇಕಿತ್ತು ಎಂದರೆ ಸಾಕ್ಷಿಯು ಮುಂಚೆಯೇ ಭಾಗ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಿಭಾಗಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ವಾದಿಯು ಆಸ್ತಿ ತನಗೆ ಬರಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ದಾವಾಸ್ವತ್ತು ಸ್ವತಃ ಚಿಕ್ಕರಂಗಪ್ಪರವರ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು 1 ನೇ ಪ್ರತಿವಾದಿಯಾದ ಚಿಕ್ಕರಂಗಪ್ಪರವರು ಖರೀದಿ ಮಾಡಿದ್ದರು. ಅವರು ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಚಿಕ್ಕರಂಗಪ್ಪರವರು ಆಸ್ತಿಯನ್ನು ಖರೀದಿ ಮಾಡಿದ್ದರ ಬಗ್ಗೆ ಹೇಗೆ ತಿಳಿಯಿತು ಎಂದರೆ ಸಾಕ್ಷಿಯು ಆಸ್ತಿಯನ್ನು ನಾವು ಖರೀದಿಸಬೇಕೆಂದಿದ್ದೆವು ಆ ಕಾರಣ ಗೊತ್ತಾಯಿತು ಎಂದು ನುಡಿಯುತ್ತಾರೆ. ಚಿಕ್ಕರಂಗಪ್ಪ ಆಸ್ತಿಯನ್ನು ನನಗೆ ಮಾರಾಟ ಮಾಡಿಲ್ಲ ಎಂಬ ಕೋಪದಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕರಂಗಪ್ಪರವರಿಗೆ ದಾವಾಸ್ವತ್ತು ಯಾರ ಮೂಲಕ ಬಂದಿತು ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತು 1 ನೇ ಪ್ರತಿವಾದಿ ಚಿಕ್ಕರಂಗಪ್ಪರವರಿಗೆ ಅವರ ಪಿತ್ರಾರ್ಜಿತ ಆಸ್ತಿಯಲ್ಲಿ ವಿಭಾಗದ ಸ್ವತ್ತಾಗಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಚಿಕ್ಕರಂಗಪ್ಪರವರ ತಂದೆ ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯ ರವರು ಬೇಗ ತೀರಿಕೊಂಡ ಕಾರಣ ತಿಮ್ಮಣ್ಣ ಅಲಿಯಾಸ್ ತಿಮ್ಮಯ್ಯರವರ ಅಣ್ಣ

ಚಿಕ್ಕದಾಸಪ್ಪರವರು ಚಿಕ್ಕರಂಗಪ್ಪರವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕದಾಸಪ್ಪರವರು ತನ್ನ ಅಣ್ಣನ ಮಗನಾದ ಚಿಕ್ಕರಂಗಪ್ಪನನ್ನು ಸಾಕಿ ತನ್ನ ತಮ್ಮನ ಭಾಗವನ್ನು ಚಿಕ್ಕರಂಗಪ್ಪರವರಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಚಿಕ್ಕರಂಗಪ್ಪರವರ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕ್ಕರಂಗಪ್ಪರವರ ಹೆಸರಿಗೆ ಆಗಿರುವ ಕ್ರಯಪತ್ರವನ್ನು ನೋಡಿರುತ್ತೇನೆ ಅದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ಆಗುವ ಕಾಲಕ್ಕೆ ನಾನು ಹೋಗಿರಲಿಲ್ಲ ಕಾರಣ ನಾನು ಅಪ್ರಾಪ್ತನಾಗಿದ್ದೆ. ನಿಡಿ-2 ರಲ್ಲಿ ಅನಂತಯ್ಯರವರ ಧರ್ಮಪತ್ನಿ ಈರಮ್ಮ ಎಂದು ಇದೆ ಎಂದರೆ ಸರಿ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪ್ರತಿವಾದಿಗೆ ಸಹಾಯಮಾಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನದಲ್ಲಿ ಈಗಲೂ ವಾದಿಯೇ ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ದಾವಾಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಕೇವಲ 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದರು. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಎಂದರೆ ಸರಿಯಲ್ಲ. ವಾದಿಯ ಕಾನೂನು ಬದ್ಧ ಹಕ್ಕನ್ನು ಕಿತ್ತುಕೊಳ್ಳಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>ಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ.**